# ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

PCR No 29 /2023

ಸಿಡಬ್ಲ್ಯೂ 1

ಹೆಸರುಃ ಹರ್ಷ ಗಣಪತಿ ಭಟ್

ತಂದೆ/ಗಂಡನ ಹೆಸರುಃ ಗಣಪತಿ ಭಟ್

ವಯಸ್ಸುಃ 40 ವರ್ಷ

ಉದ್ಯೋಗಃ ಪೌರೊಹಿತ್ಯ ಮತ್ತು ವ್ಯವಹಾರ, Managing Director, Panchami Tech Services

ವಾಸಃ ಗುಂಜಗೊಡ, ಸಿದ್ದಾಪುರ

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 05-11-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎಂ ಜಿ ಎಚ್ ವಕೀಲರಿಂದಃ**

ನಾನು ಪಿರ್ಯಾದಿ ಪಂಚಮಿ ಟೆಕ್ ಸರ್ವಿಸ್ ನ ಮ್ಯಾನೆಜಿಂಗ ಡೈರೆಕ್ಟರ್ ಆಗಿರುತ್ತೇನೆ. ನಾನು ಮತ್ತು ವೇಂಕಟ್ರಮಣ ಹೆಗಡೆ, ಪ್ರಸನ್ನ ಹೆಗಡೆ,ಕುಶಾಲ ಹೆಗಡೆ, ವಿಜಯಾನಂದ ಹೆಗಡೆ ಲಕ್ಷ್ಮೀಶ ದಿಕ್ಷಿತ್ ಸೇರಿಕೊಂಡು ಪಿರ್ಯಾದಿ ಪಂಚಮಿ ಟೆಕ್ ಸರ್ವಿಸ್ ನ್ನು ಗುಂಜಗೊಡು ಗ್ರಾಮದಲ್ಲಿ ಸ್ಥಾಪಿಸಿರುತ್ತೇವೆ.

2. 1 ನೇ ಆರೋಪಿ ನಮ್ಮ ಪಿರ್ಯಾದಿ ಸಂಸ್ಥೆಗೆ ದೂರವಾಣಿ ಕರೆ ಮಾಡಿ ಕೆಲವೊಂದು ಪ್ರೊಜೆಕ್ಟ ಮಾಡುತ್ತಿರಾ ಎಂದು ಕೇಳಿರುತ್ತಾರೆ. ಆಗಸ್ಟ -2021 ರಂದು 1 ನೇ ಆರೋಪಿ ನಮ್ಮ ಪಿರ್ಯಾದಿ ಸಂಸ್ಥೆಗೆ ದೂರವಾಣಿ ಕರೆ ಮಾಡಿ ಪಂಚಾಯತ್ ರಾಜ್ಯ ಮತ್ತು ಗ್ರಾಮೀಣ ಅಬಿವೃದ್ದಿ ಇಲಾಖೆಯಿಂದ ಗ್ರಂಥಾಲಯ ಡಿಜಿಟಲ್ ಕರಣಕ್ಕೆ ಕೆಲಸದ ಗುತ್ತಿಗೆಯನ್ನು ಮಾಡುತ್ತಿರಾ ಎಂದು ಕೇಳಿರುತ್ತಾರೆ. ನಂತರ ಆ ಬಗ್ಗೆ ನಾನು ವಿಚಾರಿಸಿದಾಗ, ರಾಜ್ಯ ಸರ್ಕಾರದವರು ನೀಡಿದ ಒಂದು ನೋಟೀಸ್ ನ ದೃಢಿಕೃತ ಪ್ರತಿಯನ್ನು ನೀಡಿರುತ್ತಾರೆ. ನಂತರ 1 ನೇ ಆರೋಪಿ ನಿಗದಿಪಡಿಸಿದ ಬೆಂಗಳೂರಿನ ಸ್ಥಳದಲ್ಲಿ ಬೇಟಿಯಾಗಿ ಆಗ 1 ನೇ ಆರೋಪಿ ಒಂದು ಜಿಲ್ಲೆಗೆ 7 ಲಕ್ಷ ದಂತೆ ಕೊಡಬೇಕಾಗುತ್ತದೆ ಎಂದು ಹೇಳಿದ್ದರಿಂದ ಆ ನಂತರ ಸದರಿ ಗ್ರಂಥಾಲಯದ ಡಿಜಿಟಲಿಕರಣವನ್ನು ಯಾವ ರೀತಿ ಮಾಡಬೇಕು ಎಂದು 1 ನೇ ಆರೋಪಿ ನನಗೆ ತಿಳಿಸಿರುತ್ತಾರೆ. ಆ ನಂತರ ನಾವು ನಮ್ಮ ಜೊತೆ ಎ ಟಿ ಕೆ ಕ್ಲೌಡ್ ಸೊಲ್ಯೂಷನ್ , ಪರ್ಮನೆಂಟ್ ಸೊಲ್ಯೂಷನ್ ಮತ್ತು ಮೈಕ್ರೊ ಮೌಲ್ಡ ಅ್ಯಂಡ್ ಪ್ಲಾಸ್ಟಿಕ್ ರವರನ್ನು ನಮ್ಮ ಜೊತೆಗೆ ಸೇರಿಸಿಕೊಂಡು ಸದರಿ ಪ್ರಾಜೆಕ್ಟಗೆ ಸಬಂದಿಸಿದಂತೆ ನಾವೆಲ್ಲರೂ ಮಾತಾಡಿಕೊಂಡಿರುತ್ತೇವೆ. ನಂತರ 1 ನೇ ಆರೋಪಿ ಸದರಿ ಪ್ರಾಜೆಕ್ಟಗೆ ಸಂಬಂದಿಸಿದಂತೆ ಅಡ್ವಾನ್ಸ ಹಣವಾಗಿ ಪ್ರತಿ ಜಿಲ್ಲೆಗೆ 3 ರಿಂದ 4 ಲಕ್ಷ ಕೊಡಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ಆ ನಂತರ ನಾವೆಲ್ಲರೂ

ಮಾತಾಡಿಕೊಂಡು ಚಿಕ್ಕಮಂಗಳೂರು, ಬಾಗಲಕೋಟೆ , ಕಲಬುರ್ಗಿ , ಶಿವಮೊಗ್ಗ, ತುಮಕೂರು , ಹಾಸನ, ಮಂಡ್ಯ, ಮೈಸೂರು ಜಿಲ್ಲೆ ಗಳಲ್ಲಿ ಸದರಿ ಪ್ರಾಜೆಕ್ಟ ಮಾಡಲು ನಾವೆಲ್ಲರೂ ಒಪ್ಪಿಕೊಂಡಿರುತ್ತೇವೆ. ಆ ನಂತರ ಆ ಬಗ್ಗೆ 1 ನೇ ಆರೋಪಿಯೊಂದಿಗೆ ಮಾತನಾಡಿ, ಸದರಿ ಜಿಲ್ಲೆಗಳಲ್ಲಿ ಸದರಿ ಪ್ರಾಜೆಕ್ಟ ಅನುಷ್ಠಾನ ಗೊಳಿಸಲು confirm ಮಾಡಿಕೊಂಡಿರುತ್ತೇವೆ. ನಂತರ 1 ನೇ ಆರೋಪಿ ಸದರಿ ಅಡ್ವಾನ್ಸ ಹಣವನ್ನು ಪಾವತಿ ಮಾಡಲು ತನ್ನ ಅಕೌಂಟ್ ನಂಬರ ಮತ್ತು 2, 4 ರಿಂದ 7 ರವರ ಅಕೌಂಟ್ ಡಿಟೆಲ್ಸನ್ನು ನೀಡಿ ಸದರಿ ಅಕೌಂಟ್ ಗಳಿಗೆ ಸದರಿ ಅಡ್ವಾನ್ಸ ಹಣವನ್ನು ಪಾವತಿ ಮಾಡುವಂತೆ ತಿಳಿಸಿರುತ್ತಾರೆ. 1 ನೇ ಆರೋಪಿ ಹೇಳಿದ ಪ್ರಕಾರ 1 ನೇ ಆರೋಪಿ HDFC Bank ಖಾತೆಗೆ ನನ್ನ ವಯಕ್ತಿಕ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ ದಿಃ 18-08-2021 ರಂದು ರೂ.1,00,000/- ಪಾವತಿ ಮಾಡಿರುತ್ತೇನೆ. 1 ನೇ ಆರೋಪಿ HDFC BANK ಖಾತೆಗೆ ನನ್ನ ವಯಕ್ತಿಕ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ ದಿಃ 15-09-2021 ರಂದು ರೂ.3,00,000/- ಪಾವತಿ ಮಾಡಿರುತ್ತೇನೆ. 1 ನೇ ಆರೋಪಿ HDFC BANK ಖಾತೆಗೆ ಪಿರ್ಯಾದಿ ಪಂಚಮಿ ಟೆಕ್ ಸರ್ವಿಸ್ ಸಂಸ್ಥೆ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ ದಿಃ 29-10-2021 ರಂದು ರೂ.6,00,000/- ಪಾವತಿ ಮಾಡಿರುತ್ತೇನೆ. 1 ನೇ ಆರೋಪಿ HDFC BANK ಖಾತೆಗೆ ನನ್ನ ಸ್ನೇಹಿತರಾದ ಚಂದನ ಎಂಬುವವರ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ ದಿಃ 16-11-2021 ರಂದು ರೂ.3,00,000/- ಪಾವತಿ ಮಾಡಿರುತ್ತೇನೆ. 1 ನೇ ಆರೋಪಿ HDFC BANK ಖಾತೆಗೆ ನನ್ನ ಸ್ನೇಹಿತರಾದ ಗಣಪತಿ ಹೆಗಡೆರವರ ಖಾತೆ ಇರುವ ಕದಂಬ ಕೊ ಆಪರೇಟಿವ ಸೊಸೈಟಿ ಶಿರಸಿ ಶಾಖೆಯಿಂದ ದಿಃ 30-11-2021 ರಂದು ರೂ.2,00,000/- ಪಾವತಿ ಮಾಡಿರುತ್ತೇನೆ. 1 ನೇ ಆರೋಪಿಗೆ ರೂ.9,50,000/- ಹಣವನ್ನು ನಗದು ಮೂಲಕ ನಾನು ಪಾವತಿ ಮಾಡಿರುತ್ತೇನೆ. 1 ನೇ ಆರೋಪಿಯ ಖಾತೆಗೆ ಈ ಮೇಲೆ ಹೇಳಿದಂತೆ ಒಟ್ಟು ರೂ.16,00,000/- ಹಣವನ್ನು ಪಾವತಿ ಮಾಡಿರುತ್ತೇವೆ.

3. 2 ನೇ ಆರೋಪಿ ಆಕ್ಸಿಸ್ BANK ಖಾತೆಗೆ ನನ್ನ ವಯಕ್ತಿಕ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ ದಿಃ 15-09-2021 ರಂದು ರೂ.6,00,000/- ಪಾವತಿ ಮಾಡಿರುತ್ತೇನೆ. 2 ನೇ ಆರೋಪಿ ಆಕ್ಸಿಸ್ BANK ಖಾತೆಗೆ ಪಿರ್ಯಾದಿ ಸಂಸ್ಥೆ ಪಂಚಮಿ ಟೆಕ್ ಸರ್ವಿಸ್ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ ದಿಃ 29-10-2021 ರಂದು ರೂ.6,00,000/- ಪಾವತಿ ಮಾಡಿರುತ್ತೇನೆ. 2 ನೇ ಆರೋಪಿ ಆಕ್ಸಿಸ್ BANK ಖಾತೆಗೆ ನನ್ನ ಸ್ನೇಹಿತನಾದ ವಿಜಯಾನಂದ ಹೆಗಡೆ ರವರ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ



ದಿಃ 16-11-2021 ರಂದು ರೂ.3,00,000/- ಪಾವತಿ ಮಾಡಿರುತ್ತೇನೆ. 2 ನೇ ಆರೋಪಿ ಆಕ್ಸಿಸ್ BANK ಖಾತೆಗೆ ನನ್ನ ಸ್ನೇಹಿತರಾದ ಪ್ರಶಾಂತ ಹೆಗಡೆರವರ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ ದಿಃ

01-12-2021 ರಂದು ರೂ.4,50,000/- ಪಾವತಿ ಮಾಡಿರುತ್ತೇನೆ. 2 ನೇ ಆರೋಪಿಯ ಖಾತೆಗೆ ಈ ಮೇಲೆ ಹೇಳಿದಂತೆ ಒಟ್ಟು ರೂ.19,50,000/- ಹಣವನ್ನು ಪಾವತಿ ಮಾಡಿರುತ್ತೇವೆ.

4. 4 ನೇ ಆರೋಪಿ HDFC BANK ಖಾತೆಗೆ ನನ್ನ ಸ್ನೇಹಿತನಾದ ವಿಜಯಾನಂದ ಹೆಗಡೆ ರವರ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ ದಿಃ 16-11-2021 ರಂದು ರೂ.3,00,000/- ಪಾವತಿ ಮಾಡಿರುತ್ತೇನೆ.

5. 7 ನೇ ಆರೋಪಿ SOUTH INDIAN BANK ಖಾತೆಗೆ ನನ್ನ ಸ್ನೇಹಿತನಾದ ವಿಜಯಾನಂದ ಹೆಗಡೆ ರವರ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮಿಣ ಬ್ಯಾಂಕ್ ಸಿದ್ದಾಪುರ ಶಾಖೆಯಿಂದ ದಿಃ 01-12-2021 ರಂದು ರೂ.4,50,000/- ಪಾವತಿ ಮಾಡಿರುತ್ತೇನೆ.

6. 5 ನೇ ಆರೋಪಿ HDFC BANK ಖಾತೆಗೆ ನನ್ನ ಸ್ನೇಹಿತನಾದ ಅನಂತ ಹೆಗಡೆ ರವರ ಖಾತೆ ಇರುವ HDFC BANK ಬೆಂಗಳೂರು ಶಾಖೆಯಿಂದ ರೂ.50,000/- ಪಾವತಿ ಮಾಡಿರುತ್ತೇನೆ.

7. 6 ನೇ ಆರೋಪಿ SBI BANK ಖಾತೆಗೆ ನನ್ನ ಸ್ನೇಹಿತನಾದ ಸತೀಶ ಹೆಗಡೆ ರವರ ಖಾತೆ ಇರುವ SVC BANK ಬೆಂಗಳೂರು ಶಾಖೆಯಿಂದ ದಿಃ 20-11-2021 ರಂದು ರೂ.2,50,000/- ಪಾವತಿ ಮಾಡಿರುತ್ತೇನೆ. 6 ನೇ ಆರೋಪಿ SBI BANK ಖಾತೆಗೆ ನನ್ನ ಸ್ನೇಹಿತನಾದ ಸಂಜೀವ ಹೆಗಡೆ ರವರ ಖಾತೆ ಇರುವ ಯಾಕೊ ಬ್ಯಾಂಕ್ ಬೆಂಗಳೂರು ಶಾಖೆಯಿಂದ ದಿಃ 20-11-2021 ರಂದು ರೂ.50,000/- ಪಾವತಿ ಮಾಡಿರುತ್ತೇನೆ. 6 ನೇ ಆರೋಪಿ HDFC BANK ಖಾತೆಗೆ ನನ್ನ ಸ್ನೇಹಿತನಾದ ಮಂಜುನಾಥ ರವರ ಖಾತೆ ಇರುವ ICICI BANK ಬೆಂಗಳೂರು ಶಾಖೆಯಿಂದ ದಿಃ 09-11-2021 ರಂದು ರೂ.3,00,000/- ಪಾವತಿ ಮಾಡಿರುತ್ತೇನೆ.

8. ನಂತರ 1 ನೇ ಆರೋಪಿ ನಮಗೆ 8 ಜಿಲ್ಲೆಗಳಿಗೆ ಸಂಬಂದಿಸಿದಂತೆ ಗ್ರಂಥಾಲಯ ಡಿಜಿಟಲಿಕರಣಕ್ಕೆ ಸಂಬಂದಿಸಿದಂತೆ WORK ORDER ಕೊಡಿಸುತ್ತೇನೆ ಎಂದು ತಿಳಿಸಿರುತ್ತಾರೆ. ಆ ನಂತರ ಉಳಿದ ಬಾಕಿ ಹಣವನ್ನು ಪಾವತಿ ಮಾಡಬೇಕು ಎಂದು ತಿಳಿಸಿರುತ್ತಾರೆ. ಸದರಿ WORK ORDER ನ್ನು ನಿಗದಿತ ಸಮಯದಲ್ಲಿ ಕೊಡಿಸಲು ಆಗದಿದ್ದರೆ ನಮ್ಮಿಂದ ಪಡೆದ ಹಣವನ್ನು ಮರುಪಾವತಿ ಮಾಡುವುದಾಗಿ ತಿಳಿಸಿರುತ್ತಾನೆ. ನಂತರ 1 ನೇ ಆರೋಪಿ ಸೆಪ್ಟೆಂಬರ್ -2021 ರಲ್ಲಿ ಮೇಲೆ ಹೇಳಿದಂತೆ WORK ORDER ಬಂದಿರುತ್ತದೆ ಎಂದು ನಮಗೆ



ತಿಳಿಸಿರುತ್ತಾರೆ. ನಂತರ ಸದರಿ WORK ORDER ನ್ನು ನಾವು ಪರಿಶೀಲಿಸಿದಾಗ ಸದರಿ WORK ORDER ರೀತಿಯಲ್ಲಿ ಇರದೇ ಸೂಚನಾ ಪತ್ರದಂತೆ ಇರುವುದು ನಮಗೆ ಕಂಡುಬಂದಿರುತ್ತದೆ. ನಂತರ ನಾನು 1 ನೇ ಆರೋಪಿಗೆ ದೂರವಾಣಿ ಮೂಲಕ ವಿಚಾರಿಸಿದಾಗ, 1 ನೇ ಆರೋಪಿ ಪ್ರತಿ ಜಿಲ್ಲೆಗೆ ಹೋಗಿ ತಾವು ತಮ್ಮ ಕೆಲಸ ಮಾಡಿ ಎಂದು ತಿಳಿಸಿರುತ್ತಾರೆ. ನಂತರ 1 ನೇ ಆರೋಪಿ ಹೇಳಿದಂತೆ ನಾವು ಕೆಲವು ಜಿಲ್ಲೆಗಳಿಗೆ ಬೇಟಿ ನೀಡಿ 1 ನೇ ಆರೋಪಿ ಹೇಳಿದಂತೆ ಪ್ರತಿಜಿಲ್ಲೆಯ ಜಿಲ್ಲಾ ಪಂಚಾಯತ, ತಾಲೂಕ ಪಂಚಾಯತ ಮತ್ತು ಗ್ರಾಮ ಪಂಚಾಯತ ಗೆ ಬೇಟಿ ಮಾಡಿ, ಆ ಬಗ್ಗೆ ವಿಚಾರಿಸಿದಾಗ ಜಿಲ್ಲಾ ಪಂಚಾಯತ, ತಾಲೂಕ ಪಂಚಾಯತ ಮತ್ತು ಗ್ರಾಮ ಪಂಚಾಯತ ಗಳಿಂದ ನಮಗೆ ಸಕಾರಾತ್ಮಕವಾಗಿ ನಮಗೆ

ಸ್ಪಂದಿಸಿರುವುದಿಲ್ಲ. ನಂತರ ಆ ಬಗ್ಗೆ 1 ನೇ ಆರೋಪಿಯೊಂದಿಗೆ ಸಂಪರ್ಕಿಸಿ ವಿಚಾರಿಸಿದಾಗ ಸ್ವಲ್ಪ ದಿನದಲ್ಲಿ ಸಂಬಂದಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಮಾತನಾಡಿ ನಿಮಗೆ ತಿಳಿಸುತ್ತೇನೆ ಎಂದು ಹೇಳಿರುತ್ತಾರೆ. ನಂತರ 1 ನೇ ಆರೋಪಿಯೊಂದಿಗೆ ಸಾಕಷ್ಟು ಬಾರಿ ವಿಚಾರಿಸಿದರೂ ಸಹ ಯಾವುದೇ ಉಪಯೋಗ ಆಗಿರುವುದಿಲ್ಲ.

9. ಆ ನಂತರ 1 ನೇ ಆರೋಪಿ ಸರ್ಕಾರದಲ್ಲಿ ಈಗ FUNDS ಇರುವುದಿಲ್ಲ ಮಾರ್ಚ 2022 ರ ನಂತರ ಸದರಿ ಪ್ರಾಜೆಕ್ಟನ್ನು ಪ್ರಾರಂಬಿಸುವಂತೆ ನಮಗೆ ತಿಳಿಸಿರುತ್ತಾರೆ. ನಂತರ ನಾವು ಮಾರ್ಚ 2022 ರಿಂದ ಮೇ –2022 ರ ವರೆಗೆ 1 ನೇ ಆರೋಪಿಯಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಆ ನಂತರ ನಾನು 1 ನೇ ಆರೋಪಿಯನ್ನು ಆ ಬಗ್ಗೆ ವಿಚಾರಿಸಿದಾಗ 1 ನೇ ಆರೋಪಿ ಸರಿಯಾಗಿ ಪ್ರತಿಕ್ರಿಯಿಸಿರುವುದಿಲ್ಲ ಹಾಗೂ 1 ನೇ ಆರೋಪಿಯನು ಸಂಪರ್ಕಿಸಿದಾಗ ದೂರವಾಣಿ ಕರೆಯನ್ನು ರಿಸಿವ್ ಮಾಡಿರುವುದಿಲ್ಲ. ನಂತರ 1 ನೇ ಆರೋಪಿ ನಮಗೆ ವಂಚನೆ ಮಾಡುತ್ತಿರುವುದಾಗಿ ನಮ್ಮ ಮನಸ್ಸಿಗೆ ಅನ್ನಿಸಿರುತ್ತದೆ.

10. 2023 ರಲ್ಲಿ ನಾವು ಪಿರ್ಯಾದಿ ಸಂಸ್ಥೆಯಿಂದ ಮತ್ತು ಇತರೆ ಮೂರು ಸಂಸ್ಥೆಯವರು ಸೇರಿಕೊಂಡು 1 ನೇ ಆರೋಪಿಯನ್ನು ವಿಚಾರಿಸಿದಾಗ, 1 ನೇ ಆರೋಪಿ ಸಕಾರಾತ್ಮಕವಾಗಿ ಸ್ಪಂದಿಸಿರುವುದಿಲ್ಲ ಮತ್ತು ಈ ಪ್ರಾಜೆಕ್ಟ FAIL ಆಗಿರುತ್ತದೆ ಬೇರೇ ಪ್ರಾಜೆಕ್ಟ ಕೊಡಿಸುವುದಾಗಿ ಹೇಳಿರುತ್ತಾರೆ. ನಂತರ ಸದರಿ ನಾನು ಪಾವತಿ ಮಾಡಿದ ಒಟ್ಟು ರೂ56 ಲಕ್ಷ ಹಣವನ್ನು ಮರುಪಾವತಿ ಮಾಡಲು ಕೇಳಿದಾಗ 1 ನೇ ಆರೋಪಿ ಮರುಪಾವತಿ ಮಾಡುವುದಿಲ್ಲ ಎಂದು ತಿಳಿಸಿರುತ್ತಾನೆ.

11. ದಿಃ 18–03–2023 ರಂದು ನಾವೆಲ್ಲರೂ ಸೇರಿ ಪೋಲೀಸ ಠಾಣೆಯಲ್ಲಿ 1 ನೇ ಆರೋಪಿಗೆ ದೂರು ನೀಡಲು ನಿರ್ದರಿಸಿರುತ್ತೇವೆ. ದಿಃ 20–03–2023 ರಂದು ನಾವೆಲ್ಲರೂ ಸಿದ್ದಾಪುರ ಪೋಲೀಸ ಠಾಣೆಗೆ ಹೋಗಿ ದೂರು ನೀಡಲು ಹೋಗಿರುತ್ತೇವೆ. ಆಗ ಸಿದ್ದಾಪುರ ಪೋಲೀಸ ಠಾಣೆಯವರು ದೂರು ನೀಡಲು ವಿಳಂಬ ವಾಗಿರುವ ಕಾರಣ ಈ ದೂರನ್ನು ಸ್ವೀಕರಿಸಲು ಆಗುವುದಿಲ್ಲ ಎಂದು ಹೇಳಿರುತ್ತಾರೆ. ದಿಃ



28–03–2023 ರಂದು SP ಉತ್ತರಕನ್ನಡ ಜಿಲ್ಲೆ ಕಾರವಾರ ರವರಿಗೆ ಮತ್ತು ಸಿದ್ದಾಪುರ ಪೋಲೀಸ ಠಾಣೆಗ ಅಂಚೆಯ ಮೂಲಕ ನನ್ನ ದೂರನ್ನು ಕಳುಹಿಸಿರುತ್ತೇನೆ. ನಂತರ SP ಉತ್ತರಕನ್ನಡ ಜಿಲ್ಲೆ ಕಾರವಾರ ರವರಿಗೆ ಮತ್ತು ಸಿದ್ದಾಪುರ ಪೋಲೀಸ ಠಾಣೆರವರು ಯಾವುದೇ ಕ್ರಮ ಕೈಗೊಳ್ಳದೆ ಇದ್ದುದರಿಂದ ಖಾಸಗಿ ದೂರನ್ನು ಸಲ್ಲಿಸಿರುತ್ತೇವೆ. ನಂತರ ನನ್ನ ವಕೀಲರಿಗೆ ಸಂಪರ್ಕಿಸಿ ಮಾಹಿತಿ ಪಡೆದು ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಖಾಸಗಿ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ನಂತರ ಸಿದ್ದಾಪುರ ಪೋಲೀಸ ಠಾಣೆಯವರು ಸದರಿ ಈ ಪ್ರಕರಣದ ತನಿಖೆಯನ್ನು ಮಾಡಲು ಆರೋಪಿಯ ಪರವಾಗಿ B REPORT ಸಲ್ಲಿಸಿರುತ್ತಾರೆ.

12. ಆದ್ದರಿಂದ ಆರೋಪಿತರ ವಿರುದ್ದ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಮುಂದುವರೆದ ಸತ್ಯಾಪನೆ ಹೇಳಿಕೆಗೆ ಸಮಯ ಕೋರಿದ್ದು ಸಮಯ ನೀಡಿ ಮೂಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ ಸರಿ ಇದೆ.

ಸಹಿ ಇದೆ.

ಜೆ.ಎಂ.ಎಫ್.ಸಿ, ಸಿದ್ದಾಪುರ.